# ಕಾಶ್ಮೀರದ ಟ್ವಿಟಾಲ್‌ನಲ್ಲಿ ಪ್ರಾಚೀನ ಶಾರದಾ ದೇವಾಲಯ ಮತ್ತು ಶಾರದಾ ಕೇಂದ್ರ ನಿರ್ಮಾಣ

**ಮಂಡಗದ್ದೆ ಪ್ರಕಾಶಬಾಬು ಕೆ.ಆರ್.**

ಆದಿ ಶಂಕರರ ಜ್ಞಾನಪಾರಮ್ಯವನ್ನು ಸಾಕ್ಷಾತ್ ಶಾರದೆಯೇ ಕಂಡುಕೊಂಡು ಅವರನ್ನು ಅನುಗ್ರಹಿಸಿದ ಅತಿ ಮಹತ್ವದ ಶಾರದಾ ಮಂದಿರ ವಿರುವುದು ಈಗಿನ ಪಾಕ್ ಆಕ್ರಮಿತ ಕಾಶ್ಮೀರದಲ್ಲಿ. ಇತ್ತೀಚೆಗೆ ಶ್ರದ್ಧಾವಂತ ಭಕ್ತರ ಪ್ರಯತ್ನದಿಂದ ಅಲ್ಲಿಗೆ ಸಮೀಪದ ಪ್ರದೇಶದಲ್ಲಿ ಶಾರದಾ ಮಂದಿರದ ಮರುನಿರ್ಮಾಣ ಕಾರ್ಯ ನಡೆಯುತ್ತಿದೆ. ಈ ಬಗ್ಗೆ ಇಲ್ಲಿ ವಿವರಿಸಿರುವ ಲೇಖಕರು ಧರ್ಮ, ಸಂಸ್ಕೃತಿಗಳ ಚಿಂತಕರು. ಬೆಂಗ ಳೂರು ರಾಮಕೃಷ್ಣ ಮಠದ ಭಕ್ತರೂ ಆಗಿರುವ ಅವರ ಅನೇಕ ಲೇಖನಗಳು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾಗಿವೆ.

ಒಂದು ಕಾಲದಲ್ಲಿ ಹಿಂದೂಗಳಿಗೂ ಮತ್ತು ಬೌದ್ಧರಿಗೂ ಪೂಜ್ಯ ಅಧ್ಯಯನದ ಸ್ಥಳವಾಗಿದ್ದ ಕಾಶ್ಮೀರದ ಶಾರದಾ ಪೀಠ, ಜ್ಞಾನದ ರಾಜಧಾನಿಯಾಗಿ ಪ್ರಾಚೀನ ನಾಗರಿಕತೆಯ ಜೀವಂತ ಸಂಕೇತವಾಗಿತ್ತು. ಶತಮಾನಗಳ ಕಾಲ (ಸುಮಾರು ಕ್ರಿ.ಪೂ. ೨೭೩ ರಿಂದ ಕ್ರಿ.ಶ. ೭೫೦ ಅಶೋಕ ಚಕ್ರವರ್ತಿಯ ಆಳ್ವಿಕೆ ಯಿಂದ ರಾಜ ಲಲಿತಾದಿತ್ಯನವರೆಗೆ) ಪ್ರಾಬಲ್ಯವನ್ನು ಹೊಂದಿದ್ದ ಬೌದ್ಧಧರ್ಮದ ಮೇಲೆ ಆದಿ ಶಂಕರಾಚಾರ್ಯರು ವೈಚಾರಿಕ ಗೆಲುವನ್ನು ಸಾಧಿಸಿದ ನಂತರ ನಿಜವಾದ ಸನಾತನ ಧರ್ಮದ ಪುನರುಜ್ಜೀವನ ನಡೆಯಿತು. ಶಂಕರರ ಜೀವನದಲ್ಲಿ ಕಂಡುಬರು ವಂತೆ, ಕಾಶ್ಮೀರದ ಸರ್ವಜ್ಞ ಪೀಠದಲ್ಲಿ ಅವರು ಸಾಕ್ಷಾತ್ ಶಾರದೆ ಯಿಂದ ಅನುಗ್ರಹಿಸಲ್ಪಟ್ಟರು. ಈ ಪೀಠವು ಇಂದು ಪಾಕ್ ಆಕ್ರ ಮಿತ ಕಾಶ್ಮೀರದಲ್ಲಿದೆ. ಶಾರದಾ ಪೀಠಕ್ಕೆ ತೀರ್ಥಯಾತ್ರೆ ಪುನರ್ ಆರಂಭಿಸುವ ಸಲುವಾಗಿ 'ಸೇವ್ ಶಾರದಾ ಕಮಿಟಿ' (ಶಾರದಾ ಉಳಿಸಿ ಸಮಿತಿ) ಕಳೆದ ಹದಿನೈದು ವರ್ಷಗಳಿಂದ ಹೋರಾಟ ನಡೆಸುತ್ತಿದೆ. ಅವರ ಗುರುಗಳಾದ, ಮತ್ತು ಶಾರದಾ ಪೀಠದ ನಿವಾಸಿ ಗಳಾದ ಸ್ವಾಮಿ ನಂದಲಾಲ್ ಅವರು ೧೯೪೮ರಲ್ಲಿ ಕೊನೆಯ ಬಾರಿ ತೀರ್ಥಯಾತ್ರೆಯನ್ನು ಇಲ್ಲಿಂದಲೇ ಮಾಡಿದ್ದರು. ಯೂ ಟ್ಯೂಬ್‌ನಲ್ಲಿ ಇದರ ವೀಡಿಯೋವನ್ನು ವೀಕ್ಷಿಸಬಹುದು.

### ಟ್ವಿಟಾಲ್ ಎಲ್ಲಿದೆ ? ಇದರ ಮಹತ್ವ ಏನು?

ಶ್ರೀಶಾರದಾ ಸರ್ವಜ್ಞಪೀಠದ ಯಾತ್ರೆಗೆ ಸಾಂಪ್ರದಾಯಿಕ ಮಾರ್ಗಕ್ಕೆ ಟ್ವಿಟಾಲ್ ಒಂದು ಮಾರ್ಗ. ಇದು ಈಗ ಪ್ರಸ್ತುತ ನಿಯಂತ್ರಣ ರೇಖೆಯ (LOC) ಉದ್ದಕ್ಕೂ ಪವಿತ್ರ ಕಿಶನ್‌ಗಂಗಾ ನದಿಯ ದಡದಲ್ಲಿದೆ. ಇಲ್ಲಿನ ಸ್ಥಳೀಯ ಸಂಪ್ರದಾಯದಂತೆ 'ಚಾರಿ ಮುಬಾರಕ್' ಎಂದು ಕರೆಯಲ್ಪಡುವ ವಾರ್ಷಿಕ ಶ್ರೀ ಶಾರದಾ ಪೀಠದ ಯಾತ್ರೆಯು ಇಲ್ಲಿಂದಲೇ ಪ್ರಾರಂಭವಾಗು ತ್ತಿತ್ತು. ಆಗ ಯಾತ್ರಾರ್ಥಿಗಳು ಚಿಲ್ಹಾನ ಗ್ರಾಮಕ್ಕೆ ಹೋಗಿ ಅಟು ಮುಕಂ ಮತ್ತು ದುಧ್ನಿಯಾಲ್ ಮೂಲಕ ಶ್ರೀಶಾರದಾ ಪೀಠ ವನ್ನು ತಲುಪಿ, ಅಲ್ಲಿ ಪವಿತ್ರ ದೈವಿಕ ಸಾಂಪ್ರದಾಯಿಕ ವಿಧಾನ ಪೂಜೆಗಳನ್ನು ಪೂರೈಸುತ್ತಿದ್ದರು. ಆಗ ಆ ಸಮಯದಲ್ಲಿ ಕಾಶಿ ಯಿಂದ ಸ್ವಾಮಿ ಲಾಲ್‌ಜಿ ಮತ್ತು ಸ್ವಾಮಿ ನಂದಲಾಲ್ ಜಿ ಹಾಗೂ ಇನ್ನು ಅನೇಕ ಸಾಧುಸಂತರು ಅದರಲ್ಲಿ ಭಾಗಿಯಾಗುತ್ತಿದ್ದರು.



೧೯೪೭ರ ಮೊದಲು, LOC ನ ಟೀಟ್ವಾಲ್‌ನಲ್ಲಿ ಒಂದು ಸಣ್ಣ ಗುರುದ್ವಾರ ಮತ್ತು ಧರ್ಮಶಾಲೆ ಶಾರದಾ ಯಾತ್ರಾರ್ಥಿ ಗಳಿಗೆ ಮೂಲಶಿಬಿರವಾಗಿ ಕಾರ್ಯ ನಿರ್ವಹಿಸು ತ್ತಿತ್ತು. ಮೊದಲನೆ ಯದನ್ನು ಪ್ರಧಾನವಾಗಿ ಖಾತ್ರಿ ವ್ಯಾಪಾರ ಸಮುದಾಯವು – ವಿಶೇಷವಾಗಿ ಅರಣ್ಯ ಹಿಡುವಳಿದಾರ ಮತ್ತು ಗುತ್ತಿಗೆದಾರ ಲಾಲಾ ಮೇಲಾ ರಾಮ್ ನಿಂದ ಹಣವನ್ನು ಸ್ವೀಕರಿಸಿ ನಿರ್ವಹಿಸಲಾಗುತ್ತಿತ್ತು. ೭೨ ವರ್ಷಗಳ ನಂತರ ಕಾಶ್ಮೀರದ ಸ್ಥಳೀಯ ಜನರು 'ಶಾರದಾ ಉಳಿಸಿ ಸಮಿತಿ'ಯನ್ನು ಸಂಪರ್ಕಿಸಿ ದೈವಾನುಗ್ರಹದಿಂದ ಮೂಲ ಶಿಬಿರದ ಭೂಮಿ ಯನ್ನು ಈ ಸಮಿತಿಗೆ ಪುನಃ ಹಸ್ತಾಂತರಿಸಿದರು.

ಪ್ರತಿವರ್ಷ ಆಚರಿಸುವ 'ಶಾರದಾ ದಿನ' ಎಂಬ ದಿನವನ್ನು ಈ ಬಾರಿ ೧೪.೦೮.೨೦೨೧ರಂದು ವಾರ್ಷಿಕ ಯಾತ್ರೆಯ ಕೊನೆಯ ದಿನದಂದು ನಡೆಸಲಾಯಿತು. ಆ ಸಮಯದಲ್ಲಿ ಭಾರ ತೀಯ ಸೇನೆ ಮತ್ತು ಕಂದಾಯ ಅಧಿಕಾರಿಗಳೊಂದಿಗೆ ಮಾತುಕತೆ ನಡೆಯಿತು. ವಿಚಾರ ವಿನಿಮಯ ನಡೆದು, ಈ ಪ್ರದೇಶದಲ್ಲಿ ಶಾರದಾ ದೇವಾಲಯ ಮತ್ತು ಕೇಂದ್ರವನ್ನು ಸ್ಥಾಪಿಸುವ ಅಗತ್ಯ ಮನವರಿಕೆಯಾಯಿತು. ಸಮಿತಿಯು ಈ ದಿಕ್ಕಿನಲ್ಲಿ ವೇಗವಾಗಿ ಕೆಲಸವನ್ನು ಪ್ರಾರಂಭಿಸಿತು. ಮೂಲ 'ಶಾರದಾ ಉಳಿಸಿ ಸಮಿತಿ'ಯ ಅಡಿಯಲ್ಲಿ ವಿಭಿನ್ನ ಸಂಪ್ರದಾಯಗಳು '**ಶಾರದಾ ಯಾತ್ರಾ ದೇವಸ್ಥಾನ ಸಮಿತಿ**'ಯನ್ನು ರಚಿಸಿತು.

ಈ ಸಮಿತಿಯು ಈ ಸ್ಥಳದಲ್ಲಿ ಶ್ರೀಶಾರದಾ ದೇವಾಲಯ ಹಾಗೂ ಗುರುದ್ವಾರವನ್ನು ಸ್ಥಾಪಿಸಲು ಯೋಜನೆಯನ್ನು ಹಾಕಿಕೊಂಡಿದೆ.

### ಟ್ವಿಟಾಲ್‌ಗೆ ಹೇಗೆ ಹೋಗುವುದು?

ಜಮ್ಮು ಮತ್ತು ಕಾಶ್ಮೀರದ ಟೀಟ್ವಾಲ್ ಅತಿದೊಡ್ಡ ವಾಣಿಜ್ಯ ಕೇಂದ್ರ. ಇದು ಕಿಶನ್‌ಗಂಗಾ ನದಿಯ ದಡದಲ್ಲಿದೆ. ಇದು ಶ್ರೀನಗರದಿಂದ ೧೬೦ ಕಿ.ಮೀ. ದೂರದಲ್ಲಿದೆ. ಇಲ್ಲಿಗೆ ರಸ್ತೆಯ ಮೂಲಕ ೫ ಗಂಟೆಗಳ ಪ್ರಯಾಣ ಮಾಡಿ ಸಾಧನಾ ಪಾಸ್ ಮೂಲಕ ಕುಪ್ವಾರ ಜಿಲ್ಲೆಯ ತಂಗ್‌ಧರ್‌ಗೆ ಪ್ರಯಾಣಿಸಬಹುದು. ಟಿಟ್ವಾಲ್ ತಂಗ್‌ಧರ್‌ನಿಂದ ಸುಮಾರು ೩೦ ನಿಮಿಷ ಪ್ರಯಾಣದ ದೂರದಲ್ಲಿದೆ. ತಂಗ್‌ಧಾರ್‌ನ ಹವಾಮಾನವು ಕಾಶ್ಮೀರ ಕಣಿವೆಯ ಉಳಿದ ಭಾಗಗಳಂತೆಯೇ ಇರುವುದು. ಭೌಗೋಳಿಕ ದೃಷ್ಟಿಯಿಂದ ಟೀಟ್ವಾಲ್ ಜಮ್ಮು ಪ್ರದೇಶವನ್ನು ಸ್ವಲ್ಪ ಹೋಲುತ್ತದೆ. ಮುಖ್ಯವಾಗಿ ಈಗ ಆಗುತ್ತಿರುವ ದೇವಾಲಯವು ಪಿ.ಒ.ಕೆ. ಯಲ್ಲಿನ ನಿಯಂತ್ರಣ ರೇಖೆಯಿಂದ ಸ್ಪಷ್ಟವಾಗಿ ಗೋಚರಿಸುತ್ತದೆ. ಟೀಟ್ವಾಲ್‌ನಿಂದ ಮೂಲ ಶ್ರೀಶಾರದಾ ಸರ್ವಜ್ಞಪೀಠಕ್ಕೆ ಕೇವಲ ೨೫ ಕಿ.ಮೀ. ದೂರವಿದೆ.

### ಸ್ಥಳ ಯಾವ ರೀತಿ ಇರುವುದು?

ಶ್ರೀಶಾರದಾ ದೇವಾಲಯವನ್ನು ಕಂದಾಯ ದಾಖಲೆಗಳ ಪ್ರಕಾರ ಬೇಸ್ ಕ್ಯಾಂಪ್ ಮತ್ತು ಪಕ್ಕದ ಗುರುದ್ವಾರದ ಭೂಮಿ ಒಟ್ಟು ೨೩ ಮಾರ್ಲಾಗಳು (೬೯೦ ಚದರ ಗಜಗಳು ಅಥವಾ ೬೨೧೦ ಚದರ ಅಡಿ). ಗುರುದ್ವಾರಕ್ಕೆ ೫ ಮಾರ್ಲಾ; ಶಾರದಾ ದೇವಸ್ಥಾನಕ್ಕೆ ೧೩ ಮಾರ್ಲಾ (೩೯೦ ಚದರ ಗಜ ಅಥವಾ ೩೫೧೦ ಚದರಡಿ). ಅಪ್ರೋಚ್ ರಸ್ತೆಯು ಮುಖ್ಯ ರಸ್ತೆಯಿಂದ ೭೫೦ ಗಜಗಳಷ್ಟು ದೂರದಲ್ಲಿದೆ ಮತ್ತು ೮ ಅಡಿ ಅಗಲವಿದೆ. ಮುಖ್ಯ ಸಂಪರ್ಕ ರಸ್ತೆಗೆ ಕಲ್ಪಿಸಲು ಇನ್ನೊಂದು ಬದಿಯಲ್ಲಿ ಅಪ್ರೋಚ್ ರಸ್ತೆ ನಿರ್ಮಿಸಲು ಕಂದಾಯ ಇಲಾಖೆಗೆ ಸಮಿತಿಯು ವಿನಂತಿ ಮಾಡಿಕೊಂಡಿದೆ.

### ಶ್ರೀ ಶಾರದಾ ದೇವಾಲಯ ಯಾವ ರೀತಿ ಇರುವುದು?

P.O.K. ನಲ್ಲಿದ್ದ ಪುರಾತನ ಶಾರದಾ ಸರ್ವಜ್ಞಪೀಠದ ದೇವಾಲಯದ ವಾಸ್ತುಶಿಲ್ಪದ ವೈಭವವನ್ನು ಹೋಲುವಂತೆ ಈ ಹೊಸ ದೇವಾಲಯವು ಇರುತ್ತದೆ. ಮುಖ್ಯ ಗೋಡೆಗಳನ್ನು ಸ್ಥಳೀಯವಾಗಿ ಲಭ್ಯವಿರುವ ಕಲ್ಲುಗಳಿಂದಲೇ ನಿರ್ಮಿಸಲಾಗುವುದು. ಶ್ರೀ ಶಾರದಾಂಬೆಯ ವಿಗ್ರಹವು ಶೃಂಗೇರಿ ಶಾರದಾ ಪೀಠದಲ್ಲಿರುವ ಶ್ರೀಶಾರದಾಂಬೆಯ ವಿಗ್ರಹದ ಹಾಗೆಯೇ ಇರುವುದು.

ಈ ದೇವಾಲಯವು ೪ ಬಾಗಿಲುಗಳನ್ನು ಹೊಂದಿರುತ್ತದೆ. ಶ್ರೀ ಶಂಕರಾಚಾರ್ಯರು ೪ ಮಠಗಳನ್ನು ಸ್ಥಾಪಿಸಿ ೪ ಜನ ಶಿಷ್ಯರನ್ನು ಒಂದೊಂದು ಪೀಠಕ್ಕೆ ಮೊದಲನೇ ಜಗದ್ಗುರುಗಳನ್ನಾಗಿ ನೇಮಿಸಿದರು. ಮೂಲ ಸರ್ವಜ್ಞಪೀಠದ ದೇವಾಲಯವು ಸಹ ೪ ಬಾಗಿಲುಗಳನ್ನು ಹೊಂದಿತ್ತು. ಆ ಮಾದರಿಯಲ್ಲಿಯೇ ಈ ದೇವಾಲಯದ ನಿರ್ಮಾಣ ನಡೆಯುವುದು. ಈ ಬಾಗಿಲುಗಳ ಮೇಲೆ 'ಪ್ರಜ್ಞಾನಂ ಬ್ರಹ್ಮ' 'ತತ್ತ್ವಮಸಿ', 'ಅಯಮಾತ್ಮಾ ಬ್ರಹ್ಮ', ಹಾಗೂ 'ಅಹಂ ಬ್ರಹ್ಮಾಸ್ಮಿ' – ಈ ಮಹಾವಾಕ್ಯಗಳನ್ನು ಕೆತ್ತಲಾಗುವುದು.



### ದೇವಾಲಯ ಭೂಮಿಪೂಜೆ

ಈಗಾಗಲೇ ಶ್ರೀ ಶಾರದಾ ದೇವಾಲಯದ ಭೂಮಿ ಪೂಜೆಯು ೨.೧೨.೨೦೨೧ ರಂದು ನಡೆದಿದೆ; ಎಲ್ಲಾ ವಿಧಿವಿಧಾನಗಳೊಂದಿಗೆ ಪೂಜೆ ವಿಶೇಷವಾಗಿ ನೆರವೇರಿದೆ. ಆ ದಿನ ಸಮಾರಂಭದ ಅಧ್ಯಕ್ಷತೆಯನ್ನು ಭಾರತ ಸರ್ಕಾರದ ಕೇಂದ್ರೀಯ ವಕ್ಫ್ ಕೌನ್ಸಿಲ್ ಅಧ್ಯಕ್ಷರಾದ ಡಾ. ದರಕ್ಷಣ್ ಅಂದ್ರಾಬಿ ಭಾಗವಹಿಸಿದ್ದರು.

ಶ್ರೀಶಾರದಾ ದೇವಸ್ಥಾನ ನಿರ್ಮಾಣದ ಕಾರ್ಯವು ಶೀಘ್ರದಲ್ಲಿ ಪ್ರಾರಂಭವಾಗಲಿದೆ. ಉದ್ದೇಶಿತ ಶಾರದಾ ಕೇಂದ್ರದ ಯೋಜನೆಯ ಮುಂದಿನ ಹಂತವು ನಡೆಯುತ್ತಿದೆ. ಈ ದೇವಾಲಯದ ನೀಲಿನಕ್ಷೆ ಮತ್ತು ೨ ಆಯಾಮದ ಚಿತ್ರ ಈಗಾಗಲೇ ಸಿದ್ಧವಾಗಿದೆ. ಗೋಡೆ ನಿರ್ಮಾಣ ಕಾರ್ಯ ಭರದಿಂದ ಸಾಗಿದೆ.

ಶ್ರೀ ಶಾರದಾ ದೇವಾಲಯದಲ್ಲಿ ಪ್ರತಿಷ್ಠಾಪನೆಗೊಳ್ಳಲಿರುವ ಪಂಚಲೋಹದ ವಿಗ್ರಹಕ್ಕೆ ಶೃಂಗೇರೀ ಪೀಠದ ಜಗದ್ಗುರುಗಳು ವಿಧ್ಯುಕ್ತವಾಗಿ ಪೂಜೆ ಸಲ್ಲಿಸಿ, ಅಲ್ಲಿಂದಲೇ ರಥಯಾತ್ರೆಯ ಮೂಲಕ ಕಾಶ್ಮೀರಕ್ಕೆ ವಿಗ್ರಹವನ್ನು ಕಳುಹಿಸಿಕೊಡಲಾಯಿತು. ಈ ವರ್ಷ ಜನವರಿ ೨೪ರಿಂದ ಆರಂಭಗೊಂಡ ಈ ರಥಯಾತ್ರೆಯು ಶೃಂಗೇರಿಯಿಂದ ಆರಂಭಗೊಂಡು, ಬೆಂಗಳೂರು, ಮುಂಬಯಿ, ಪುಣೆ, ಜೈಪುರ, ದೆಹಲಿ, ಚಂಡೀಗಢ, ಅಮೃತಸರ ಹಾಗೂ ಜಮ್ಮು ಮೂಲಕ ಸಾಗಿ, ಟೀಟ್ವಾಲ್ ತಲುಪುವುದು. ೨೦೨೩ರ ಮಾರ್ಚ್ ೨೪ರಂದು ಟೀಟ್ವಾಲ್‌ನ ದೇವಾಲಯದಲ್ಲಿ ವಿಗ್ರಹದ ಪ್ರತಿಷ್ಠಾಪನೆ ನೆರವೇರಲಿದೆ.

ಈ ದೇವಾಲಯದ ಮರುಸ್ಥಾಪನೆಯೊಂದಿಗೆ, ಆದಿ ಶಂಕರರ ಸರ್ವಜ್ಞಪೀಠಾರೋಹಣ ಹಾಗೂ ಶಾರದಾಂಬೆಯ ಅನುಗ್ರಹ ನಡೆದ ಅತ್ಯದ್ಭುತ ಹಾಗೂ ಪವಿತ್ರನೆಲವು ಮತ್ತೆ ವೈಭವದ, ದಿವ್ಯತೆಯ ದಿನಗಳನ್ನು ಕಾಣುವುದೆಂದು ಆಶಿಸೋಣ. ಸನಾತನ ಧರ್ಮದ ಪುನರುಜ್ಜೀವನ ಮಾಡಿದ ಶ್ರೀಶಂಕರರ ಈ ಮಹತ್ವದ ದೇಗುಲವು ಭಾರತದ ಇತಿಹಾಸಕ್ಕೆ ಅಲಂಕಾರಪ್ರಾಯವಾಗಿದೆ. ✽